<u>ಅಪರ ಸಿವಿಲ್ ಮತ್ತು ಜೆಎಂಎಫ್ಸಿ ನ್ಯಾಯಾಲಯ, ಚನ್ನಪಟ್ಟಣ</u>

<u>ಪ್ರಕರಣ ಸಂಖ್ಯೆಃ ಸಿ.ಸಿ.1154/2021</u>

ದಿನಾಂಕಃ 15.09.2023
(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)

ಪ್ರಾ.ಸಾಃ 3 (ಚಾ.ಸಾ.3)

| | | |
|---|---|---|
| ಹೆಸರು | : | ರವಿಕಿರಣ್ ಎನ್ |
| ತಂದೆಯ ಹೆಸರು | : | ನಾಗರಾಜು ಬಿ |
| ವಯಸ್ಸು | : | 33 ವರ್ಷ |
| ಉದ್ಯೋಗ | : | ಪಿಸಿ, ಅಬಕಾರಿ |
| ವಾಸ ಸ್ಥಳ | : | ಆಣೆದೊಡ್ಡಿ ಗ್ರಾಮ, ಹಾರೋಹಳ್ಳಿ |

<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>

ನಾನು ಡಿಸೆಂಬರ್ 2020 ರಿಂದ ಡಿಸೆಂಬರ್ 2022 ರವರೆಗೆ ಅಬಕಾರಿ ಪೇದೆಯಾಗಿ, ಜಿಲ್ಲಾ ವಿಚಕ್ಷಣ ದಳದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ತಾಃ 18.12.2020 ರಂದು ಚಾಸಾ.4, ಚಾಸಾ.6, ಮತ್ತು ನನ್ನನ್ನು ಚನ್ನಪಟ್ಟಣದಲ್ಲಿ ಗಸ್ತು ಕರ್ತವ್ಯಕ್ಕೆ ನೇಮಿಸಿದ್ದರು. ಗ್ರಾಮ ಪಂಚಾಯತಿ ಚುನಾವಣೆ ಇರುವ ಕಾರಣ ನೀತಿ ಸಂಹಿತೆ ಜಾರಿಗೆ ಇತ್ತು. ಎಲ್ಲರೂ ಗಸ್ತಿನಲ್ಲಿರುವಾಗ ಸುಮಾರು ಮಧ್ಯಾಹ್ನ 3.30 ಗಂಟೆ ಸಮಯದಲ್ಲಿ ಚಾಸಾ.6 ರವರಿಗೆ ಅಕ್ರಮವಾಗಿ ಬೆಂಗಳೂರು ಕಡೆಯಿಂದ ಮೈಸೂರು ಕಡೆಗೆ ಮದ್ಯ ಸಾಗಾಣೆ ಮಾಡುತ್ತಿರುವ ಬಗ್ಗೆ ಮಾಹಿತಿ ಬಂತು.

3. ಪ್ರಾಸಾ.1 ಮತ್ತು 2 ರವರನ್ನು ಪಂಚರಾಗಿ ಬರಮಾಡಿ ಮಾಡಿಕೊಂಡು, ನಂತರ ನಾವೆಲ್ಲರೂ ಶೇರವ್ ಹೋಟೆಲ್ ಬಳಿ ಪರಿಶೀಲನೆ ಮಾಡುತ್ತಿದ್ದಾಗ, ಆಗ ಒಂದು ಹೋಂಡಾ ಆಕ್ಟಿವ್‌ನಲ್ಲಿ ಒಬ್ಬ ಆಸಾಮಿ ಬಂದರು. ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ಗಲಿಬಿಲಿಕೊಂಡಾಗ ನಾವು ಅವರನ್ನು ತಡೆದು ನಿಲ್ಲಿಸಿ, ಅವರ ವಾಹನ ಮತ್ತು ಅವರನ್ನು ಪರಿಶೀಲಿಸಿದಾಗ, ಅವರ ದ್ವಿಚಕ್ರ ವಾಹನ ಪುಟ್‌ರೆಸ್ಟನಲ್ಲಿ ಒಂದು ಬಿಳಿ ಚೀಲದಲ್ಲಿ 90 ಮೀ, ಯ 45 ಟೆಟ್ರಾ ಪ್ಯಾಕೆಟ್

ಬೆಂಗಳೂರು ರಮ್, 90 ಮೀ, ಯ 45 ಟೆಟ್ರಾ ಪ್ಯಾಕೆಟ್ ಬೆಂಗಳೂರು ಜಿನ್ ಇದ್ದವು. ಅವುಗಳ ಬಗ್ಗೆ ಪರವಾನಿಗೆ ಇದೇಯಾ ಎಂದು ವಿಚಾರಿಸಿದಾಗ ಯಾವುದೇ ಪರವಾನಿಗೆ ಇರುವುದು ಕಂಡು ಬಂತು. ಸದರಿ ಮಾಲನ್ನು ಮಾರಾಟ ಮಾಡುವ ಉದ್ದೇಶಕ್ಕಾಗಿ ಸಾಗಣೆ ಮಾಡುತ್ತಿರುವುದು ಕಂಡು ಬಂತು.

4. ನಂತರ ಅವುಗಳನ್ನು ನಾವು ಪಂಚರ ಸಮಕ್ಷಮ ವಶಪಡಿಸಿಕೊಂಡೆವು. ಅವುಗಳಲ್ಲಿ ತಲಾ 17 ಟೆಟ್ರಾ ಪ್ಯಾಕೆಟ್‌ಗಳನ್ನು ರಾಸಾಯನಿಕ ಪರೀಕ್ಷೆಗಾಗಿ ತೆಗೆದುಕೊಂಡು, ಒಂದು ಬಿಳಿ ಬಟ್ಟೆಯ ಚೀಲದಲ್ಲಿ ಹಾಕಿ ಇಲಾಖಾ ಸೀಲಿನಲ್ಲಿ ಸೀಲು ಮಾಡಿ ವಶಪಡಿಸಿಕೊಳ್ಳಲಾಯಿತು. ಸಾಕ್ಷಿ ಗುರುತಿಸಿದ ಮಹಜರನ್ನು ಈಗಾಗಲೇ ನಿಪಿ.1 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.1(ಸಿ) ಎಂದು ಗುರುತಿಸಲಾಯಿತು.

5. ಸಾಕ್ಷಿ ಗುರುತಿಸಿದ ಎರಡು ಬಿಳಿಯ ಚೀಲದಲ್ಲಿರುವ 90 ಮೀ, ಯ 17 ಟೆಟ್ರಾ ಪ್ಯಾಕೆಟ್ ಬೆಂಗಳೂರು ರಮ್‌ನ್ನು ಒಟ್ಟಾಗಿ ಮತ್ತು 90 ಮೀ, ಯ 17 ಟೆಟ್ರಾ ಪ್ಯಾಕೆಟ್ ಬೆಂಗಳೂರು ಜಿನ್‌ಗಳನ್ನು ಒಟ್ಟಾಗಿ ಈಗ ಕ್ರಮವಾಗಿ ಎಂಒ.1 ಮತ್ತು 2 ಎಂದು ಗುರುತಿಸಲಾಯಿತು.

6. ನಿಪಿ.1 ರ ಕಾಲಕ್ಕೆ ಆರೋಪಿಯ ವಾಹನವನ್ನು ಸಹ ವಶಪಡಿಸಿಕೊಳ್ಳಲಾಯಿತು. ನಂತರ ಸದರಿ ವಾಹನವನ್ನು ಚನ್ನಪಟ್ಟಣದ ಅಬಕಾರಿ ನಿರೀಕ್ಷಕರ ವಶಕ್ಕೆ ನೀಡಲಾಯಿತು. ಆರೋಪಿಯ ವಾಹನವನ್ನು ವಶಕ್ಕೆ ಪಡೆದಾಗ ತೆಗೆದ ಫೋಟೋವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ.3 ಎಂದು ಗುರುತಿಸಲಾಯಿತು.

7. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಈ ಬಗ್ಗೆ ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿರುತ್ತೇನೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ.ಆರ್‌ಕೆಆರ್., ವಕೀಲರಿಂದಃ</u>

8. ಶೋಧನೆ ಮಾಡಿದ ಸ್ಥಳದ ಚಕ್ಕುಬಂಧಿ ಪೂ - ಬೆಂಗಳೂರು ರಸ್ತೆ, ಪ - ಮೈಸೂರು ರಸ್ತೆ, ಉ - ಎಪಿಎಂಸಿ ಮಾರ್ಕೆಟ್, ದ- ಕೆಂಚಯ್ಯನದೊಡ್ಡಿ ರಸ್ತೆ.

ಚಾಸಾ.6 ಮಾಹಿತಿ ಬಂದ ಸಮಯದಲ್ಲಿ ಚನ್ನಪಟ್ಟಣ ಟೌನ್‌ನಲ್ಲಿ ಇದ್ದೆವು. ವಾಹನದಲ್ಲಿ ಚಲಿಸುತ್ತಿದ್ದೆವು, ಹಾಗಾಗಿ ನಿರ್ದಿಷ್ಟ ಸ್ಥಳ ಯಾವುದು ಎಂದು ಈಗ ನೆನಪಿಲ್ಲ.

9. ಶೋಧನಾ ಕಾರ್ಯದಲ್ಲಿ ಚಾಸಾ.6, ಚಾಸಾ.4, ಹೊರಗುತ್ತಿಗೆ ನೌಕರ - ಜೀಪ್ ಚಾಲಕ ಮತ್ತು ನಾನು ಇದ್ದೆವು. ನಿಮ್ಮ ನಾಲ್ಕು ಜನ ಹೊರತುಪಡಿಸಿ ಸ್ಥಳದಲ್ಲಿ ಯಾರು ಇರಲಿಲ್ಲ ಅಂದರೆ ಸಾಕ್ಷಿ ಪ್ರಾಸಾ.1 ಮತ್ತ 2 ಸಹ ಇದ್ದರು.

10. ನಿಪಿ.3 ನ್ನು ಅಬಕಾರಿ ನಿರೀಕ್ಷಕರ ಕಚೇರಿಯಲ್ಲಿ ತೆಗೆಯಲಾಯಿತು. ಘಟನಾ ಸ್ಥಳದಲ್ಲಿ ಯಾವುದೇ ಫೋಟೋ ತೆಗೆದಿಲ್ಲ ಅಂದರೆ ಸರಿ. ಮಹಜರ್ ಸಾಕ್ಷಿದಾರರಾದ ಪ್ರಾಸಾ.1 ಮತ್ತು 2 ರವರು ನಿಮ್ಮ ಜೊತೆಯಲ್ಲಿಯೇ ಇದ್ದರೇ ಅಂದರೆ ಸಾಕ್ಷಿ ಮಾಹಿತಿ ಬಂದ ನಂತರ ಅವರನ್ನು ಸ್ಥಳಕ್ಕೆ ಬರಮಾಡಿಕೊಂಡೆವು. ಆ ಸಂದರ್ಭದಲ್ಲಿ ಪ್ರಾಸಾ.1 ಮತ್ತು 2 ಎಲ್ಲಿದ್ದರು ಅಂದರೆ ಸಾಕ್ಷಿ ಶೇರವ್ ಹೋಟೆಲ್‌ನಿಂದ ಸ್ವಲ್ಪ ದೂರದಲ್ಲಿದ್ದರು.

11. ಯಾವುದೇ ಶೋಧನಾ ಕಾರ್ಯ ನಡೆಸದೇ ಇದ್ದರೂ ಸಹ ನಾನು ನನ್ನ ಮೇಲಾಧಿಕಾರಿಗಳ ಮಾತುಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ರಾಣಾ ಅಂಕಿ-ಅಂಶಕ್ಕಾಗಿ ಸುಳ್ಳು ಪ್ರಕರಣವನ್ನು ದಾಖಲು ಮಾಡಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ಬಿ.ಎನ್.ಉಷಾರಾಣಿ )
ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ಸಿ,
ಚನ್ನಪಟ್ಟಣ.